ಓ ಎಸ್ ನಂ.**376/2015**
ಡಿ ಡಬ್ಲ್ಯೂ-**1**

ದಿನಾಂಕ **05-06-2026** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರವಾಗಿ ಶ್ರೀ. ಎಸ್ ಎಸ್ ಕೆ ವಕೀಲರಿಂದಃ**

1. ಈ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅದನ್ನು ತಯಾರಿಸಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನಾನು ಬಿ ಎ ಪದವಿಯನ್ನು ಓದಿರುತ್ತೇನೆ. ಆರನೇ ಪ್ರತಿವಾದಿಯು ನನ್ನ ಅಣ್ಣ. ದಾವಾ ಆಸ್ತಿಯು ಲೈನ ಬಜಾರ, ಸಂಗಮ ಟಾಕೀಸ್ ಹತ್ತಿರ ಧಾರವಾಡದಲ್ಲಿ ಇರುತ್ತದೆ. ಆಸ್ತಿ ನಂಬರ್ ನನಗೆ ನೆನಪಿರುವುದಿಲ್ಲ. ಆಸ್ತಿಯ ಅಕ್ಕ ಪಕ್ಕ ಏನೇನು ಇರುತ್ತದೆ ಎಂದು ನನಗೆ ಗೊತ್ತಿರುತ್ತದೆ. ದಾವಾ ಆಸ್ತಿಯ ಪಕ್ಕದಲ್ಲಿ ಸಂಗಮ್ ಟಾಕೀಸ್ ಇದೆ. ಅದು ದಕ್ಷಿಣ ದಿಕ್ಕಿಗೆ ಇದೆ. ಉತ್ತರಕ್ಕೆ ಪರ್ಲ್ ಹೋಟೆಲ್ ಇದೆ. ಆಸ್ತಿಯ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಏನು ಇರುತ್ತದೆ ಎಂದರೆ ನಮ್ಮ ಆಸ್ತಿಯ ಮುಂದೆ ವೈನ್ ಶಾಪ್ ಇದೆ. ಆ ಆಸ್ತಿಯ ಒಳಗೆ ನಾನು ಕಳೆದ 45 ವರ್ಷಗಳಿಂದ ವಾಸವಾಗಿರುತ್ತೇನೆ. ದಾವಾ ಆಸ್ತಿಯಲ್ಲಿ ನಾನೊಬ್ಬನೇ ವಾಸವಾಗಿರುತ್ತೇನೆ. ದಾವಾ ಆಸ್ತಿಯಲ್ಲಿ ನಾನು ಪ್ಯಾಬ್ರಿಕೇಶನ್ ವರ್ಕನ್ನು ಮಾಡುತ್ತೇನೆ. ಅದನ್ನು ನಾನೇ ನಡೆಸುತ್ತೇನೆ.

2. ಪ್ಯಾಬ್ರಿಕೇಶನ್ ನ್ನು ನಡೆಸಲು ಅದರ ಹೆಸರು ನ್ಯೂ ಭಾರತ್ ಇಂಜಿನಿಯರಿಂಗ್ ವರ್ಕ್ಸ ಎಂದು ಇರುತ್ತದೆ. ನ್ಯೂ ಭಾರತ್ ಇಂಜಿನಿಯರಿಂಗ್ ವರ್ಕ್ಸ ಇರುತ್ತದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆದರೆ ಫೋಟೋಗಳನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ಹಾಜರು ಪಡಿಸಿರುವ ದಾಖಲೆಗಳನ್ನು ತೋರಿಸಿ ಅದರಲ್ಲಿ ಯಾವ ಪೋಟೋಗಳು ಇರುತ್ತವೆ ಎಂದು ಕೇಳಿದಾಗ ಸಾಕ್ಷಿಯು ಯಾವುದೇ ಪೋಟೊಗಳನ್ನು ತೋರಿಸಿರುವುದಿಲ್ಲ.

3. ನಾನು ಅಂದಾಜು ಮೂರು ಮೀಟರ್ ಜಾಗದಲ್ಲಿ ನನ್ನ ಫ್ಯಾಬ್ರಿಕ್ ಕೆಲಸ ಮಾಡುತ್ತೇನೆ. ನಾನು ಅಲ್ಲಿ ಬಾಡಿಗೆ ಆಧಾರದ ಮೇಲೆ ಮೊದಲು ಬಾಡಿಗೆ ಆಧಾರದಿಂದ ನನ್ನ ಕೆಲಸವನ್ನು ಮಾಡುತ್ತಿರುತ್ತೇನೆ. ಈಗ ಸಧ್ಯ ನಾನು ಯಾವುದೇ ದಾಖಲೆಗಳ ಇಲ್ಲದೇ ಆ ಆಸ್ತಿಯಲ್ಲಿ ಮುಂದುವರೆದಿರುತ್ತೇನೆ. ನಾನು ಮಾಲೀಕರೊಂದಿಗೆ ಆದ ಬಾಡಿಗೆ ಕರಾರು ಪತ್ರವನ್ನು ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ತಾವು ಹಾಜರು ಪಡಿಸಿದ ದಾಖಲೆಗಳನ್ನು ತೋರಿಸಿ ಸದರಿ ಬಾಡಿಗೆ ಕರಾರು ಪತ್ರವನ್ನು ಗುರುತಿಸಲು ಕೇಳಿದಾಗ ಸಾಕ್ಷಿಯು ಯಾವುದೇ ದಾಖಲೆಯನ್ನು ಗುರುತಿಸಿರುವುದಿಲ್ಲ. ಸಾಮಾನ್ಯವಾಗಿ ಬಾಡಿಗೆಗೆ ಹೋದಾಗ ಮಾಲೀಕರು ಬಾಡಿಗೆ ಪತ್ರವನ್ನು ಬರೆದುಕೊಡುವ ಪದ್ಧತಿ ಇರುತ್ತದೆ ಎಂದರೆ ಸರಿ. ನಾನು ದಾವಾ ಆಸ್ತಿಗೆ ಯಾವುದೇ ತರದಿಂದ ಸಂಬಂಧ ಇರುವುದಿಲ್ಲ ಎಂರದೆ ಸರಿಯಲ್ಲ. ನಾನು ಯಾವುದೇ ಅನುಮತಿ ಇಲ್ಲದೇ ದಾವಾ ಆಸ್ತಿಯಲ್ಲಿ ಅಕ್ರಮವಾಗಿ ವಾಸವಾಗಿರುತ್ತೇನೆ ಎಂದರೆ ನಾನು ಬಾಡಿಗೆಯನ್ನು ಕೊಡುತ್ತೇನೆ. ನಾನು ಯಾವುದೇ ಬಾಡಿಗೆಯನ್ನು ಕೊಡದೇ ಇದ್ದರೂ ಬಾಡಿಗೆಯನ್ನು ಕೊಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಹಾಜರು ಪಡಿಸಿರುವ ನಿಶಾನೆ ಡಿ.3 ದಾಖಲೆಯು ತೆರಿಗೆ ಪಾವತಿಸಿದ ದಾಖಲೆ ಇರುತ್ತದೆ. ಆ ದಾಖಲೆಯನ್ನು ನಾನು ಕೆಲಸ ಮಾಡುತ್ತೇನೆ ಎಂದು ತೋರಿಸುವ ಸಲುವಾಗಿ ಮತ್ತು ಮಾರಾಟ ತೆರಿಗೆ ಪಾವತಿಸುತ್ತೇನೆ ಎಂದು ತೋರಿಸಲು ಹಾಜರು ಪಡಿಸಿರುತ್ತೇನೆ. ನಾನು ಫ್ಯಾಬ್ರಿಕೇಶನ್ ವರ್ಕ ಮಾಡಿ ತೆರಿಗೆ ಪಾವತಿಸುತ್ತೇನೆ ಎಂದು ಆ ದಾಖಲೆ ಇರುತ್ತದೆ. ನಾನು ನ್ಯೂ ಭಾರತ ಇಂಜಿನಿಯರಿಂಗ್ ಹೆಸರಿನಲ್ಲಿ ಮಾರಾಟ ತೆರಿಗೆಯನ್ನು ಪಾವತಿಸುತ್ತೇನೆ. ನಾನು ದಾವಾ ಆಸ್ತಿಯಲ್ಲಿ ಕೆಲಸ ಮಾಡುತ್ತೇನೆ ಎಂದು ತೋರಿಸಲು ನಿಡಿ.3 ರ ದಾಖಲೆಯನ್ನು ಹಾಜರು ಪಡಿಸುತ್ತೇನೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ನಿಡಿ.3 ರಲ್ಲಿ ಕಂಪನಿಯ ವಿಳಾಸ ಮತ್ತು ನಾನು ಕೆಲಸ ಮಾಡುವ ವಿಳಾಸ ಇರುವುದಿಲ್ಲ ಎಂದರೆ ಸರಿ. ನಿಡಿ.3 ರಲ್ಲಿ ಹನಮಂತ ದೇವರ ಗುಡಿ ಓಣಿ, ಮಾದರ

ಮಡ್ಡಿ , ಧಾರವಾಡ ಎಂದು ಬರೆದಿದ್ದು ಇದೆ ಎಂದರೆ ಸರಿ. ಅದರಲ್ಲಿ ನನ್ನ ಹೆಸರು ಮಾತ್ರ ಇದೆ ಮತ್ತು ಕಂಪನಿಯ ಹೆಸರು ಇರುವುದಿಲ್ಲ ಎಂದರೆ ಸರಿ.

5. ನಾನು ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ತೆಂಗಿನಕಾಯಿ ಕುಟುಂಬದವರಿಗೆ ಪ್ರತಿ ತಿಂಗಳು ರೂ.100 ರೂಪಾಯಿ ಬಾಡಿಗೆ ಕೊಡುತ್ತಿದ್ದೆನು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ತೆಂಗಿನ ಕಾಯಿ ಕುಟುಂಬದವರಿಗೆ ಪ್ರತಿ ತಿಂಗಳು 100/- ರೂಪಾಯಿ ಕೊಡುತ್ತೇನೆ ಎಂದು ತೋರಿಸಲು ಈ ದಾವೆಯನ್ನು ನಾನು ದಾಖಲೆಗಳಲ್ಲಿ ಹಾಜರು ಪಡಿಸಿಲ್ಲ, ಆದರೆ ಮೊದಲಿನ ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. ನಾನು 100/- ರೂಪಾಯಿ ಬಾಡಿಗೆ ಕೊಡುತ್ತಿದ್ದೆ ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ತೆಂಗಿನ ಕಾಯಿ ಕುಟುಂಬದವರಿಗೆ 100/- ರೂಪಾಯಿ ಕೊಡುತ್ತೇನೆ ಎಂದು ಸಾಬೀತು ಪಡಿಸುವ ಸಲುವಾಗಿ ಅವರ ಕುಟುಂಬದ ಸದಸ್ಯರನ್ನು ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಲು ನಾನು ತಯಾರು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಅವರ ಕುಟುಂಬದವರು ತೀರಿಕೊಂಡಿರುತ್ತಾರೆ, ಒಬ್ಬನೇ ವ್ಯಕ್ತಿ ಮಾತ್ರ ಇರುತ್ತಾನೆ. ಆ ಒಬ್ಬ ವ್ಯಕ್ತಿಯ ಹೆಸರು ಸುನೀಲ್ ತೆಂಗಿನಕಾಯಿ ಎಂದು ಇರುತ್ತದೆ. ಆ ಸುನೀಲ್ ತೆಂಗಿನಕಾಯಿಯವರು ಎಲ್ಲಿ ವಾಸವಿರುತ್ತಾರೆ ಹಾಗೂ ಅವರ ವಿಳಾಸ ನನಗೆ ಗೊತ್ತಿರುವುದಿಲ್ಲ. ಅವರ ಸಾಕ್ಷ್ಯವನ್ನು ನಾನು ಮಾಡಿಸಲು ಆಗುವುದಿಲ್ಲ ಎಂದರೆ ಸರಿ.

6. ನಾನು ನಿಪಿ.7 ರಂತೆ ಎಚ್ ಆರ್ ಸಿ 27/1987 ನ್ನು ದಾಖಲಿಸಿದ್ದೆ ಎಂದರೆ ಸರಿ. ನಾನು ಪ್ರತಿ ತಿಂಗಳು ಜಯಕುಮಾರ ಪತ್ರಾವಳಿ ಕುಟುಂಬಕ್ಕೆ ರೂ.400/- ಗಳನ್ನು ಬಾಡಿಗೆ ಮತ್ತು ಇತರ ಖರ್ಚುಗಳನ್ನು ಕೊಡುತ್ತಿದ್ದೆ ಎಂದರೆ ಸರಿ. ಈ ವಿಷಯವು ನಿಪಿ.7 ರ ತೀರ್ಪಿನಲ್ಲಿ ಇರುತ್ತದೆ ಎಂದರೆ ಸರಿ. ಪತ್ರಾವಳಿ ಕುಟುಂಬದವರಿಗೆ ನಾನು ಬಾಡಿಗೆ ಕೊಡುತ್ತಿದ್ದೆನು ಎಂದು ತೋರಿಸಲು ಈ ದಾವೆಯಲ್ಲಿ ನಾನು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆದರೆ ಮೊದಲಿನ ಪ್ರಕರಣದಲ್ಲಿ ಹಾಜರು ಪಡಿಸಿದ್ದೇನೆ. ನಾನು ನಿಪಿ.7 ರಂತೆ ಎಚ್ ಆರ್ ಸಿ ಯನ್ನು

ದಾವೆ ಹಾಕುವ ಪೂರ್ವದಲ್ಲಿ ದಾವಾ ಆಸ್ತಿಯು ತೆಂಗಿನ ಕಾಯಿ ಕುಟುಂಬದವರಿಗೆ ಸಂಬಂಧ ಪಟ್ಟಿತ್ತು ಎಂದರೆ ಸರಿ. ಪತ್ರಾವಳಿಯವರ ವಿರುದ್ದ ಮಾತ್ರ ಎಚ್ ಆರ್ ಸಿ 27/1987 ನ್ನು ಸಲ್ಲಿಸಿದ್ದು, ತೆಂಗಿನಕಾಯಿ ಕುಟುಂಬದವನ್ನು ಯಾವ ಕಾರಣಕ್ಕಾಗಿ ಆ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಪತ್ರಾವಳಿ ಯವರು ವರ್ಕ ಶಾಪ್ ನಡೆಸುತ್ತಿದ್ದರಿಂದ ಅವರ ವಿರುದ್ದ ಮಾತ್ರ ಪ್ರಕರಣ ದಾಖಲು ಆಗಿತ್ತು. ದಿಃ25-09-1987 ರಲ್ಲಿ ಎಚ್ ಆರ್ ಸಿ ನಂ. 27/1987 ರ ತೀರ್ಪಿನಲ್ಲಿ ಮಾಲೀಕರಾದ ತೆಂಗಿನಕಾಯಿ ಕುಟುಂಬದವರಿಗೆ ಮತ್ತು ನನಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದು ಆದೇಶ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ತೆಂಗಿನ ಕಾಯಿ ಕುಟುಂಬದವರ ಆಸ್ತಿ ಎಂದು ಗೊತ್ತಿದ್ದರೂ ಸಹಿತ ನ್ಯಾಯಾಲಯದಿಂದ ಡಿಕ್ರಿ ಪಡೆದುಕೊಳ್ಳುವ ಸಲುವಾಗಿ ಎಚ್ ಆರ್ ಸಿ 27/1987 ರ ಸುಳ್ಳು ದಾವೆಯನ್ನು ಹಾಕಿದ್ದೆನು ಎಂದರೆ ಸರಿಯಲ್ಲ. ನಾನು ಪತ್ರಾವಳಿ ಗಾಗಲೀ ಅಥವಾ ತೆಂಗಿನಕಾಯಿ ಕುಟುಂಬದವರಿಗಾಗಲೀ ನಾನು ಯಾವುದೇ ಬಾಡಿಗೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

7. 1987 ರಲ್ಲಿ ತೆಂಗಿನಕಾಯಿ ಕುಟುಂಬದವರು ಪತ್ರಾವಳಿ ಕುಟುಂಬದವರ ವಿರುದ್ಧ ಎಚ್ ಆರ್ ಸಿ 23/1996 ದಾವೆಯನ್ನು ಹಾಕಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ದಾವೆಯನ್ನು ಅಭಿಜಿತ್ ತೆಂಗಿನಕಾಯಿಯವರು ಜೆ ಡಿ ಪತ್ರಾವಳಿ ವಿರುದ್ಧ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಎಚ್ ಆರ್ ಸಿ 23/1996 ಪ್ರಕರಣವು ರಾಜೀ ಆದ ಬಗ್ಗೆ ನನಗೆ ಗೊತ್ತಿರುತ್ತದೆ. ಎಚ್ ಆರ್ ಸಿ 23/1996 ರಲ್ಲಿ ನಾನು ಪಕ್ಷಗಾರರನಾಗಿ ಇರಲಿಲ್ಲ ಎಂದರೆ ಸರಿ. ಆ ಎಚ್ ಆರ್ ಸಿ ಯನ್ನು ತೆಂಗಿನಕಾಯಿ ಕುಟುಂಬದವರು ದಾವಾ ಆಸ್ತಿಯ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಎಚ್ ಆರ್ ಸಿ ನಂ.23/1996 ರಲ್ಲಿ ನಾನು ಅವಶ್ಯಕ ಪಕ್ಷಗಾರನಿರುತ್ತೇನೆ ಎಂದು ಸೇರ್ಪಡೆ ಆಗಲು ಅದರಲ್ಲಿ ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರಲಿಲ್ಲ. ಎಚ್ ಆರ್ ಸಿ ನಂ. 23/1996 ರ ರಾಜೀ ಡಿಕ್ರಿಯ ವಿರುದ್ಧ ನಾನು ಯಾವುದೇ ಅಪೀಲ್ ನ್ನು ಸಲ್ಲಿಸಿರುವುದಿಲ್ಲ. ನಿಪಿ.7 ರ ತೀರ್ಪಿನ

ಆದೇಶದ ಪ್ರಕಾರ ನಾನು ಯಾವುದೇ ಅಪೀಲ್ ನ್ನು ಸಲ್ಲಿಸಿರುವುದಿಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ನಾನು ಕೆಲಸ ಮಾಡುತ್ತಿರುವ ಫರ್ಮನ ಹೆಸರು ಇರುತ್ತದೆಯಾ ಎಂದು ಪ್ರಶ್ನೆಯನ್ನು ಕೇಳಿ ದಾಖಲೆಯಲ್ಲಿ ಹೆಸರನ್ನು ತೋರಿಸಲು ಕೇಳಿದಾಗ ಸಾಕ್ಷಿಯು ದಾಖಲೆಗಳನ್ನು ನೋಡಿ ಯಾವುದೇ ದಾಖಲೆಯನ್ನು ಗುರುತಿಸಿರುವುದಿಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ನನ್ನ ಕಂಪನಿಯ ಸೀಲ್ ಇರುವ ದಾಖಲೆ ಇರುವುದಿಲ್ಲ. ಕರ್ನಾಟಕ ಯುನಿವರ್ಸಿಟಿಯವರು ನನಗೆ ಕೆಲಸ ಮಾಡಿಕೊಡಲು ಕೊಟ್ಟ ಪತ್ರದ ಮೇಲೆ ಕರ್ನಾಟಕ ಯುನಿವರ್ಸಿಟಿಯ ಸೀಲ್ ಇರುವ ದಾಖಲೆ ಇದೆಯಾ ಎಂದು ನಿಡಿ.4 ರಿಂದ 9 ರ ದಾಖಲೆಗಳನ್ನು ತೋರಿಸಿದಾಗ ಸಾಕ್ಷಿಯು ಸೀಲ್ ಇರುವ ದಾಖಲೆಯನ್ನು ತೋರಿಸಿರುವುದಿಲ್ಲ. ನಿಡಿ.6 ಮತ್ತು 7 ದಾಖಲೆಯಲ್ಲಿ ನನ್ನ ಕಂಪನಿಯ ಸೀಲ್ ಮತ್ತು ಸಹಿಗಳು ಇರುವುದಿಲ್ಲ. ನಾನು ಹಾಜರು ಪಡಿಸಿರುವ ಎಲ್ಲ ದಾಖಲೆಗಳು ಸುಳ್ಳು ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ. ಎಲ್ಲ ದಾಖಲೆಗಳನ್ನು ನಾನು ಈ ಪ್ರಕರಣಕ್ಕೆ ಅನುಕೂಲವಾಗಲೆಂದು ಹಾಜರು ಪಡಿಸಿರುವ ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ. ನನಗೂ ಮತ್ತು ದಾವಾ ಆಸ್ತಿಗೂ ಯಾವುದೇ ತೆರೆನಾದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯೂ ಭಾರತ ಫ್ಯಾಬ್ರಿಕ್ ಇಂಜಿನಿಯರಿಂಗ್ ಕಂಪನಿಯ ಹೆಸರಿನಲ್ಲಿ ಯಾವುದೇ ಕಂಪನಿಯನ್ನು ನಡೆಸುತ್ತಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಅಕ್ರಮ ಕಬ್ಜೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ದಾವಾ ಆಸ್ತಿಯಲ್ಲಿ ಅಕ್ರಮ ಕಬ್ಜೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ  ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.